# ಮಾದರಿ ಪ್ರಶ್ನೆಪತ್ರಿಕೆ ೭.

## ಪ್ರಥಮ ಭಾಷೆ ಕನ್ನಡ        ೧೦ ನೇ ತರಗತಿ

ಗರಿಷ್ಠ ಅಂಕ: ೧೦೦                    ಅವಧಿ : ೨.೪೫  ಗಂಟೆಗಳು

### ಭಾಗ -'ಎ'

ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧**

೧.ಅಮೆರಿಕದ ಮಗಳ ಮನೆಯಲ್ಲಿ ಗೊರೂರು ದಂಪತಿಗಳು ಗಾಬರಿಯಾಗಲು ಕಾರಣವಾದ ಅಂಶ ಯಾವುದು ?

೨.ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?

೩. ಬುಕ್ಕರಾಯನ ಹಿರಿಮೆ ಏನು ?

೪.ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

೫. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

೬.ಬಸವಣ್ಣನವರು ಯಾವುದನ್ನು ಮರನೇರಿದ ಮರ್ಕಟ ಎಂದಿದ್ದಾರೆ ?

೭.ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

೮ ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡನು ?

೯.ಕಲ್ಪತರು ಎಂದು ಮನೆಗಿಟ್ಟ ಹೆಸನ್ನು ಏನೆಂದು ಕನ್ನಡಿಸಬಾರದು ?

೧೦. ಮುದ್ದು ಪಾರವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?

೧೧. 'ಅನ್ ಟು ದಿ ಲಾಸ್ಟ್'ಕೃತಿಯಲ್ಲಿ ಯೋಗ್ಯ ಜೀವನದ ಕುರಿತು ಏನು ಹೇಳಲಾಗಿದೆ ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨. ಜೈನ ಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?

೧೩. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು ?

೧೪. ವಿಶ್ವೇಶ್ವರಯ್ಯನವರು ಪಡೆದ ಶಿಕ್ಷಣದ ಕುರಿತು ಬರೆಯಿರಿ.

೧೫. ದುಷ್ಟಬುದ್ಧಿಯು ಸಂಪತ್ತನ್ನೆಲ್ಲವನ್ನೂ ತನ್ನದಾಗಿಸಿಕೊಳ್ಳಲು ಮಾಡಿದ ಉಪಾಯವೇನು ?

೧೬. ಗಡಿಯ ಆಚೆ ಈಚೆ ಜೀವಿಗಳು ಶವವಾದವು ಏಕೆ ?

೧೭. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?

೧೮. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?

mamatabhagwat1@gmail.com

೧೯. ವಿಜ್ಞಾನಿಗಳು ತಮ್ಮ ಜ್ಞಾನವನ್ನು ಹೇಗೆ ತೊಡಗಿಸಬೇಕು ಎಂದು ಎಚ್ ನರಸಿಂಹಯ್ಯ ಹೇಳಿದ್ದಾರೆ ?

೨೦. ತಾವರೆ ಬೇರಿನ ಕುರಿತು ಇರುವ ಜನಪದ ಒಗಟನ್ನು ವಿವರಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨

೨೧.' ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು '

೨೨.''ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ ?''

೨೩. ''ನಾಳಿನ ಕನಸನು ಬಿತ್ತೋಣ''

೨೪. ''ಎಲ್ಲ ಜನರಿಗೆ ಜೋರು ಮಾಡಿ ಕಸಿದುಕೊಳ್ಳಿರಿ ಹತಾರ''

ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬

೨೫. ಗೊರೂರು ರಾಮಸ್ವಾಮಿ ಅಯ್ಯಂಗಾರ್

೨೬. ಬಸವೇಶ್ವರ

೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪

ನೀಲಮೇಘ --------------------------

--------------------------------

--------------------------

----------------------------------

----------------------------- ನೋಡಿದಿರಾ ?

ಅಥವಾ

ಯುಗ ಯುಗ ---------------------

------------------------

----------------------

--------------------------

---------------------

--------------------ನೋಡಿದಿರಾ ?

೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪

ಬಲ್ಗಯ್ಯು ನೃಪರಂಜಿ ತಡೆಯದೆ ರಘೂದ್ವಹನ |
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ |
ನಲ್ಲುಗ್ದುರೆ ಬಂದು ವಾಲ್ಮೀಕಿಯ ನಿಜಾಶ್ರಮದ  ವಿನಿಯೋಗದುಪವನದೊಳು ||
ಪುಲ್ಗಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ|
ವಲ್ಗೆ ತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ |
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು

ಪ್ರಶ್ನೆಗಳು :

೧. ಯಾರ ಹೆಸರನ್ನು ಕೇಳಿಯೇ ನೃಪರು ಅಂಜಿ ಕುದುರೆಯನ್ನು ಕಟ್ಟಲಿಲ್ಲ ?

೨. ನೃಪರ ನಡುವಳಿಕೆಯು ಏನನ್ನು ಸೂಚಿಸುತ್ತದೆ ?

೩. ಕುದುರೆಯು ವಾಲ್ಮೀಕಿಯ ಆಶ್ರಮವನ್ನು ಪ್ರವೇಶಿಸಲು ಕಾರಣವೇನು ?

೪. ಲವನು ಹೇಗೆ ಬರುತ್ತಿದ್ದನು ?

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯.ಶಬರಿಯ ಸಡಗರ ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

ಅಥವಾ

ಶಬರಿಯು ಮೋಕ್ಷವನ್ನು ಕರುಣಿಸುವಂತೆ ರಾಮನನ್ನು ಪ್ರಾರ್ಥಿಸಿದ ಬಗೆಯನ್ನು ರಾಮನ ಪ್ರತಿಕ್ರಿಯೆಯನ್ನು ವಿವರಿಸಿ

೩೦. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

ಅಥವಾ

ದುರ್ಯೋಧನನ ತಂದೆ ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

೩೧.  ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು .ದಿನವೆಲ್ಲಾ ನಿದ್ದೆ

ಮಾಡಿ ಆಗ ತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆಬರಿದಾಗಿದೆಯೆಂದು ಭಾಸವಾಯಿತು .ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು .ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು .ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಶಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು.ಅವರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು ;ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು.ಯಾರನ್ನೇ ಆಗಲಿ ,ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ ,ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ

ಪ್ರಶ್ನೆಗಳು :

೧.ಹುಲಿಯು ಆಹಾರ ಅರಸಿ ಹೊರಟ ಬಗೆ ತಿಳಿಸಿ.

೨.ಹುಲಿಯ ಭೇಟೆಯಾಡುವ ಬಗೆ ತಿಳಿಸಿ.

ಭಾಗ – 'ಬಿ'

ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ ೧೦*೧=೧೦

೩.೨. ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು ------

ಎ)ಕ, ಚ ಬಿ)ಅ , ಆ ಸಿ)ಐ, ಔ ಸಿ)ಉ, ಊ

೩.೩. ವಿಶ್ವೇಶ್ವರಯ್ಯ ಅವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಸೇರಿದೆ .----

ಎ)ಸಾಮಾನ್ಯ ವಾಕ್ಯ ಬಿ)ಮಿಶ್ರವಾಕ್ಯ ಸಿ)ನಿಷೇಧಾರ್ಥಕ ವಾಕ್ಯ ಡಿ)ಸಂಯೋಜಿತ ವಾಕ್ಯ

೩.೪. ಹಾಗಾದರೆ ನಿಮಗೆಲ್ಲ ಮನೆ ಉಂಟಾ ನನ್ನ ಮಕ್ಕಳಾ ಈ ವಾಕ್ಯದಲ್ಲಿ ಬಳಸಬೇಕಾದ

ಲೇಖನ  ಚಿಹ್ನೆ-------

ಎ) ಉದ್ಧರಣ  ಬಿ)ಭಾವಸೂಚಕ  ಸಿ)ವಾಕ್ಯವೇಷ್ಠನ  ಡಿ)ಪ್ರಶ್ನಾರ್ಥಕ

೩೫. 'ಪಚ್ಚು'ಪದದ ಹೊಸಗನ್ನಡ ರೂಪವಿದು ------

ಎ)ಹಂಚು  ಬಿ)ಹೆಚ್ಚು  ಸಿ)ಪಂಚು  ಡಿ)ಪೆಚ್ಚು

೩೬. 'ಭಗವದ್ಗೀತೆ' ಪದವು ಈ ಸಂಧಿಗೆ ಉದಾಹರಣೆಯಾಗಿದೆ-----

ಎ) ಆದೇಶ ಸಂಧಿ  ಬಿ)ಜಶ್ತ್ವಸಂಧಿ  ಸಿ)ಶ್ಚುತ್ವ ಸಂಧಿ  ಡಿ)ಗುಣ ಸಂಧಿ

೩೭. 'ಶಾನುಭೋಗರು' ಈ ಪದದಲ್ಲಿರುವ ವಿಭಕ್ತಿ ------

ಎ)ಪ್ರಥಮಾ  ಬಿ)ತೃತೀಯಾ  ಸಿ)ದ್ವಿತೀಯಾ  ಡಿ)ಚತುರ್ಥಿ

೩೮.ನಾನು ಮುಖ ಮೇಲಾಗಿ ಬಿದ್ದಿದ್ದೆ . ಈ ವಾಕ್ಯದಲ್ಲಿರುವ ಸರ್ವನಾಮ ಪದವಿದು-----

ಎ) ಮುಖ  ಬಿ)ಮೇಲಾಗಿ  ಸಿ) ಬಿದ್ದಿದ್ದೆ  ಡಿ)ನಾನು

೩೯. 'ಕಟ್ಟೇಕಾಂತ' ಪದದಲ್ಲಿರುವ ಸಮಾಸವಿದು –----

ಎ)ಕ್ರಿಯಾಸಮಾಸ  ಬಿ)ಕರ್ಮಧಾರಯ ಸಮಾಸ  ಸಿ)ದ್ವಿಗು ಸಮಾಸ  ಡಿ)ತತ್ಪುರುಷ ಸಮಾಸ

೪೦.'ಮುಂದ' ಪದದ ಗ್ರಾಂಥಿಕ ರೂಪವಿದು----

ಎ)ಮುಂದೆ  ಬಿ)ಮಂದ  ಸಿ)ಮಂದಿ  ಡಿ)ಮುಂದಾ

೪೧. ನಾವು ನಾಲ್ಕು ಮಂದಿ ಜತ್ತ .ಈ ವಾಕ್ಯದಲ್ಲಿರವ ಸಂಖ್ಯಾವಾಚಕ ಪದ –-

ಎ)ನಾವು  ಬಿ)ಮಂದಿ  ಸಿ)ಜತ್ತ  ಡಿ)ನಾಲ್ಕು

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.೪*೧=೪

೪೨.ಹಲವು : ಪರಿಮಾಣವಾಚಕ : : ಮೂಡಣ : ----

೪೩. ಓದಲಿ : ವಿಧ್ಯರ್ಥಕ  : : ಓದರು :----

೪೪. ಬಂಜೆ :ವಂದ್ಯಾ: ಸಾವಂತ :-----

೪೫. ಅಲ್ಲದೆ :ಸಂಬಂಧಾರ್ಥಕಾವ್ಯಯ ::ಸುಲ್ಯುನೆ : -----

೪೬. ಈ ಕೆಳಗಿನ ಪದ್ಯಭಾಗಕ್ಕೆಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು

ಬರೆಯಿರಿ.೧*೩=೩

ಏನು ಹೇಳೈ ಕರ್ಣಚಿತ್ತ

ಗ್ಲಾನಿ ಯಾವುದು ಮನಕೆ ಕುಂತೀ

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

ಅಥವಾ

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ

ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ

ಸಮನ್ವಯಿಸಿ.೧*೩

'ಸಮರಸವೇ ಸಹಜೀವನ'

ಅಥವಾ

'ಪ್ರೇಮಶುದ್ಧೆ ನೀನು '

ಭಾಗ -'ಸಿ'

ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.

೧*೩=೩

೧.ಬೆಕ್ಕಿಗೆ ಚೆಲ್ಲಾಟ ;ಇಲಿಗೆ ಪ್ರಾಣ ಸಂಕಟ

೨.ಹನಿಹನಿ ಕೂಡಿದರೆ ಹಳ್ಳ;ತೆನೆ ತೆನೆ ಕೂಡಿದರೆ ಬಳ್ಳ

೩.ಜಾಣನಿಗೆ ಮಾತಿನ ಪೆಟ್ಟು; ದಡ್ಡನಿಗೆ ದೊಣ್ಣೆಯ ಪೆಟ್ಟು

೪೯. ನಿಮ್ಮ ಶಾಲೆಯಿಂದ ನೀವು ಕೈಗೊಂಡ ಶಾಲಾ ಶೈಕ್ಷಣಿಕ ಪ್ರವಾಸದ ಕುರಿತು ದೂರದ ಊರಿನಲ್ಲಿರುವ ನಿಮ್ಮ ಸಹೋದರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮ ಅಣ್ಣನ ಮದುವೆಯ ನಿಮಿತ್ತ ನಾಲ್ಕು ದಿನಗಳ ರಜೆ ನೀಡುವಂತೆ ಕೋರಿ ನಿಮ್ಮ

ವರ್ಗದ ಶಿಕ್ಷಕರಿಗೆ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

* ವಿವಿಧತೆಯಲ್ಲಿ ಏಕತೆ
* ಪರಿಸರ ಮಾಲಿನ್ಯ
* ವರದಕ್ಷಿಣೆ

mamatabhagwat1@gmail.com